ಇನ್ನ್ಯಾವುದಾದರೂ ಕಂಪೆನಿಯ ಗಾಳಕ್ಕೆ ಬೀಳುವ ಸಾಧ್ಯತೆಗಳೂ ಬಹಳ ಹೆಚ್ಚಾಗಿವೆ' ಎಂದರು ಶರ್ಮಾ.

ನಿರ್ದೇಶಕರೆಲ್ಲ ಮುಖ ಮುಖ ನೋಡಿಕೊಂಡರು.

'ಥಟ್ಟನೆ ಎದುರಾಗಿರುವ ಸಮಸ್ಯೆ ಇದು. ಮಾರ್ಕೆಟ್ಟಿನಲ್ಲಿ ವೇತನ ಮಟ್ಟ ಹೇಗಿದೆ ಎಂದು ವಿಶದವಾಗಿ ಪರಿಶೀಲಿಸುವ ಅಗತ್ಯವೂ ಇದೆ. ನೀವಿಬ್ಬರು ಸೀನಿಯರುಗಳಿರುವಾಗ ಗೌರವ್ ಕೂಡ ಕಂಪೆನಿಯ ಅವಿಭಾಜ್ಯ ಅಂಗ ಎನ್ನಲಾಗದು. ನೋಡೋಣ. ಇದನ್ನು ನಿರ್ಧರಿಸಲು ಸಮಯಾವಕಾಶ ಬೇಕೆನ್ನಿಸುತ್ತದೆ' ಸುಲಭದಲ್ಲಿ ಒಪ್ಪಿಕೊಳ್ಳಲು ತಯಾರಿಲ್ಲದ ಯುವ ಡೈರೆಕ್ಟರ್ ಸೂಚಿಸಿದ.

'ಹಾಗಂತ ಹೆಚ್ಚು ಸಮಯ ತೆಗೆದುಕೊಳ್ಳಲೂ ಸಾಧ್ಯವಿಲ್ಲ' ತನ್ನ ಮಾತು ಪ್ರಭಾವ ಬೀರಿರುವುದನ್ನು ಅರಿತ ಶರ್ಮಾ ಮೊದಲ ಬಾರಿಗೆ ಯುವ ಡೈರೆಕ್ಟರನನ್ನು ಮಟ್ಟ ಹಾಕಿ ಸಭೆಯಲ್ಲಿ ಡೈರೆಕ್ಟರುಗಳ ಬೆಂಬಲ ಕೋರಿದ್ದರು.

ಡೈರೆಕ್ಟರುಗಳು ತಮ್ಮೊಳಗೇ ಗುಸುಗುಸು ಮಾತುಕತೆಯಾಡಿದರೇ ಹೊರತು ಸಭೆಯಲ್ಲಿ ಯಾವ ಅಭಿಪ್ರಾಯವೂ ಮೂಡಿ ಬರಲಿಲ್ಲ. ಸ್ವಲ್ಪ ಹೊತ್ತು ಕಾದ ಚೇರ್ಮನ್ ಬಳಿಕ ನಿರ್ವಾಹವಿಲ್ಲದೆ 'ಚರ್ಚಿಸಿ ಒಂದು ವಾರದೊಳಗೆ ತಿಳಿಸುತ್ತೇವೆ' ಎಂದರು.

★★★

ಚೇರ್ಮನ್ನರ ಸೆಕ್ರೆಟರಿ 'ಮುಖ್ಯವಾದ ವಿಚಾರವೊಂದನ್ನು ಚರ್ಚಿಸಲಿಕ್ಕಿದೆಯಂತೆ, ಸಂಜೆ ನಾಲ್ಕುಗಂಟೆಗೆ ಬರಲು ಹೇಳಿದ್ದಾರೆ' ಎಂದಾಗ ಮೆನನ್ ಆಶ್ಚರ್ಯಗೊಳ್ಳಲಿಲ್ಲ. ಇದುವರೆಗೂ ಚೇರ್ಮನ್ನರ ಸೂಚನೆಗಳು ಮೆನನ್ ಸಹಿತ ಎಲ್ಲ ಉದ್ಯೋಗಿಗಳನ್ನು ಸೇರುತ್ತಿದ್ದುದು ಏನಿದ್ದರೂ ಶರ್ಮಾರ ಶಂಖದಿಂದಲೇ. ಅಪರೂಪಕ್ಕೆ ಒಮ್ಮೊಮ್ಮೆ ಶರ್ಮಾ 'ನೀನೂ ಬಾ' ಎಂದು ಚೇರ್ಮನ್ನರ ಬಳಿ ಕರೆದೊಯ್ದದ್ದನ್ನು ಬಿಟ್ಟರೆ ತನ್ನನ್ನು ಹೀಗೆ ಚೇರ್ಮನ್ನರೇ ಕರೆದ ಉದಾಹರಣೆಯೇ ಇಲ್ಲ. ಚರ್ಚಾವಿಷಯ ಗೌರವನದ್ದು ಎಂಬುದರಲ್ಲಿ ಸಂಶಯವಿರಲಿಲ್ಲ. ತನ್ನನ್ಯಾಕೆ ಕರೆದಿದ್ದಾರೆ ಎಂಬುದೇ ಮೆನನಿಗೆ ಹುಟ್ಟಿದ ಸಂದೇಹ. ಶರ್ಮಾ ಬೋರ್ಡ್ ಮೀಟಿಂಗಿನಲ್ಲಿ ತಾನು ಹೇಳಿದ್ದನ್ನು ಹಾಗೆಯೇ ಹೇಳಿದರೇ? ಈ ವಿಚಾರದಲ್ಲಿ ಯಾವ ಅಭಿಪ್ರಾಯ ಹೊಂದಿ ಚೇರ್ಮನ್ ತನ್ನನ್ನು ಕರೆಸಿದ್ದಾರೆ? ಶರ್ಮರೂ ಅಲ್ಲಿರುತ್ತಾರೆಯೇ? ತನಗೆ ಕಾದಿರುವುದೇನು? ತನ್ನ ಅಭಿಪ್ರಾಯ ಮಂಡನೆ, ವಿಷಯ ಸ್ಪಷ್ಟನೆ, ಹೆಚ್ಚುವರಿ ಹೊಣೆ, ಛೀಮಾರಿ ಅಥವಾ ಮತ್ತಿನ್ನೇನಾದರೂ?...

ಮೆನನ್ ಮೀಸೆಯಡಿಯಲ್ಲೇ ನಕ್ಕ. ಅವರು ತನ್ನನ್ನು ಬೈಯಲಿಕ್ಕೇ ಕರೆದಿರಬಹುದಾದರೂ ತನಗೆ ಇದೊಂದು ಅವಕಾಶ. ಅವಕಾಶ ಸಿಗುವುದು ಅಂದರೆ ಹೀಗೆ. ಸಿಕ್ಕ ಅವಕಾಶಗಳನ್ನು ತನ್ನ ಅನುಕೂಲಕ್ಕೆ ತಿರುಚಿ ಸಾರ್ಥಕಗೊಳಿಸಿಕೊಳ್ಳುವುದು ಚಾಲೆಂಜು. ಬಿಸಿಯಿದ್ದಾಗಲೇ ಬಡಿದುಬಿಡಬೇಕು..

ನಾಲ್ಕು ಗಂಟೆಗೆ ಸಿದ್ಧವಾಗಿ ಮೆನನ್ ಚೇರ್ಮನ್‌ರ ಕೊಠಡಿ ತಲುಪಿದ. 'ಬಾ, ಕುಳಿತುಕೋ' ಎಂದು ಚೇರ್ಮನ್ ಮುಗುಳ್ನಗುತ್ತ ಸ್ವಾಗತಿಸಿ ಕುರ್ಚಿ ತೋರಿಸಿದರು. ವಿನಮ್ರನಾಗಿ ಕುಳಿತುಕೊಂಡ ಮೆನನ್.

'ಮೆನನ್, ಗೌರವನ ಸಮಸ್ಯೆಗೆ ಒಂದು ಸೂಕ್ತ ಉತ್ತರ ಬೇಕು. ಇಂತಹ ಸಮಸ್ಯೆಗಳು ಗಂಭೀರ ರೂಪ ಪಡೆದು ಕಂಪೆನಿಯ ಬೆಳವಣಿಗೆಗೆ ಧಕ್ಕೆಯಾಗುವುದು ಸರಿಯಲ್ಲ. ಶರ್ಮಾ